# ಟೋಪಿವಾಲಾ ಮಂಗಗಳು

■ ಮಂಡಲಗಿರಿ ಪ್ರಸನ್ನ, ರಾಯಚೂರು

ಟೋಪಿವಾಲಾ: ನಾನು ಟೋಪಿವಾಲಾ ಅಣ್ಣಾ...
ನಾನು ಟೋಪಿವಾಲಾ...
ಮಂಕೆಗಳು: ಟೋಪಿಗೆಷ್ಟು ಕಾಸು ಅಣ್ಣಾ
ಟೋಪಿಗೆಷ್ಟು ಕಾಸು...?
ಟೋಪಿವಾಲಾ: ಕಾಸು ಗೀಸು ಏನೂ ಇಲ್ಲ...
ಸುಮ್ನೆ ಕೇಳಿದ್ರೆ ಕೊಡ್ತೀನಿ...!
ಮಂಕೆಗಳು: ಹೌದಾ! ಟೋಪಿವಾಲಾ ಅಣ್ಣಾ
ಎಂಥ ಒಳ್ಳೆವ್ನು ನೀನು...?
ಟೋಪಿವಾಲಾ: ಒಳ್ಳೆವ್ನು ಗಿಳ್ಳೆವ್ನು ಅನ್ನೋಬೇಡಿ...
ಹಸಿವಾಗಿದೆ ತಿನ್ನಲು ಹಣ್ಣು ಕೊಡಿ...
ಮಂಕೆಗಳು: ಆಯ್ತು ಟೋಪಿವಾಲಾ ಅಣ್ಣಾ...
ಯಾವ ಹಣ್ಣು ಬೇಕು ನೋಡಿ...
ಟೋಪಿವಾಲಾ: ಯಾವ ಹಣ್ಣಾದ್ರೇನು ತಿನ್ನಲು...
ಸದ್ಯ ಹೊಟ್ಟೆ ತುಂಬಿದ್ರೆ ಸಾಕು...
ಮಂಕೆಗಳು: ಹಾಗಾದ್ರೆ ತಗೋ ಮಾವಿನ ಹಣ್ಣು...
ಉಪವಾಸ ಇರ್ಬೇಡ ನೀನಿನ್ನು...
ಟೋಪಿವಾಲಾ: ಆಹಾ...ಕೊಡಿ, ಬರ್ಲಿ ನಿಮಗೆ ಪುಣ್ಯ...
ತಗೊಳ್ಳಿ ಬೇಕಾದಷ್ಟು ಟೋಪಿಗಳನ್ನ...
ಮಂಕೆಗಳು: ಬೇಡ ಟೋಪಿವಾಲಾ ಅಣ್ಣಾ...
ಬೇಡ ಈಗ ನಮ್ಗೇನು...
ಹಸಿದ ಹೊಟ್ಟೆಗೆ ಹಣ್ಣು ಕೊಟ್ಟೆವಷ್ಟೆ
ಹೊತ್ತಾಗಿದೆ ನಡೆ ಇನ್ನು... ■



ಶಶಿಧರ ಹಳೇಮನಿ

# ಮರದ ನೆರಳು

■ ಬಾಲು ಪಟಗಾರ



ವಿಜಯ ಕುಮಾರಿ

ಅವನೊಬ್ಬ ಮರಕಡಿಯುವವ. ದಿನಾಲು ಸಮೀಪದ ಕಾಡಿಗೆ ಹೋಗಿ ಅಕ್ರಮವಾಗಿ ಮರಗಳನ್ನು ಕಡಿದು ಅದನ್ನು ಮಾರಾಟ ಮಾಡಿ ತನ್ನ ಜೀವನ ಸಾಗಿಸುತ್ತಿದ್ದನು. ಅವನಿಗೆ ಜೀವನ ಸಾಗಿಸಲು ಬೇರೆ ಮಾರ್ಗಗಳಿದ್ದರೂ, ಮರ ಕಡಿಯುವುದನ್ನೇ ತನ್ನ ವೃತ್ತಿಯನ್ನಾಗಿ ಮಾಡಿಕೊಂಡಿದ್ದನು. ಯಾರು ಎಷ್ಟು ತಿಳಿವಳಿಕೆ ನೀಡಿದರೂ ತನ್ನ ಈ ಕೆಟ್ಟ ವೃತ್ತಿಯನ್ನು ಮಾತ್ರ ಬಿಟ್ಟಿರಲಿಲ್ಲ. ಅವನ ಈ ತಪ್ಪು ಕೆಲಸದಿಂದ ಕಾಡಿನಲ್ಲಿರುವ ಅನೇಕ ಅಮೂಲ್ಯ ಮರಗಳು ಕಣ್ಮರೆಯಾದವು.

ಹೀಗೆಯೇ ಕೆಲವು ದಿನಗಳು ಕಳೆದವು. ಈ ಮರ ಕಡಿಯುವವನಿಂದ ಆ ಕಾಡಿನಲ್ಲಿರುವ ಎಲ್ಲಾ ಮರಗಳು ನಾಶವಾಗಿ ಕೇವಲ ಒಂದೇ ಒಂದು ಮರ ಮಾತ್ರ ಉಳಿಯಿತು. ಆ ಮರವನ್ನು ಸಹ ಕಡಿಯಲು ಅವನು ಒಂದು ದಿನ ಹೊರಟ. ಅದು ಬೇಸಿಗೆ ಕಾಲ. ಹೊರಗೆ ಸಾಕಷ್ಟು ಬಿಸಿಲು, ಧಗೆ ಇತ್ತು. ಅವನು ತನ್ನ ಮನೆಯಿಂದ ಆ ಮರದ ಹತ್ತಿರ ಬರಬೇಕಾದರೆ ಬಿಸಿಲಿನಿಂದ ಸಾಕಷ್ಟು ದಣಿದಿದ್ದ. ಮರ ಕಡಿಯುವ ಮೊದಲು ವಿಶ್ರಾಂತಿಗಾಗಿ ಆ ಮರದ ನೆರಳಿನಲ್ಲಿಯೇ ಕುಳಿತುಕೊಂಡ. ಸ್ವಲ್ಪ ಹೊತ್ತು ವಿಶ್ರಾಂತಿ ಪಡೆದ ಮೇಲೆ ಆ ಮರಕಡಿಯುವ ಸಲುವಾಗಿ ಮೇಲೆದ್ದ. ಇನ್ನೇನು ಕೊಡಲಿಯಿಂದ ಆ ಮರದ ಬುಡಕ್ಕೆ ಏಟು ಹಾಕಬೇಕೆನ್ನುತ್ತಿರುವಾಗಲೆ ಅಲ್ಲಿಯೇ ಇದ್ದ ಹಿರಿಯರೊಬ್ಬರು ಅವನನ್ನು ತಡೆದು 'ಎಲೈ ಸ್ವಾರ್ಥ ಮನುಷ್ಯನೇ, ಬಿಸಿಲಿನಲ್ಲಿ ದಣಿದು ಬಂದ ನೀನು ವಿಶ್ರಾಂತಿಗಾಗಿ ಈ ಮರದ ನೆರಳನ್ನೇ ಆಶ್ರಯಿಸಿದ್ದಿ. ಈಗ ನೆರಳು ಕೊಟ್ಟ ಈ ಮರವನ್ನೇ ಕಡಿಯಲು ಹೊರಟಿರುವೆ. ಕಳ್ಳರು, ಸುಳ್ಳರು, ಸತ್ಯವಂತರು ಎಂದು ಈ ಮರಗಳು ಭೇದಭಾವ ಮಾಡದೆ ಎಲ್ಲರಿಗೂ ನೆರಳನ್ನು ನೀಡುತ್ತದೆ. ಮರಗಳ್ಳನಾದ ನಿನಗೂ ನೆರಳನ್ನು ನೀಡಿ ಉಪಕಾರ ಮಾಡಿತು. ಆದರೆ ನೀನು ಇಂತಹ ಪರೋಪಕಾರಿ ಮರವನ್ನೇ ಕಡಿಯಲು ಹೊರಟಿರುವೆ; ಇದು ಯಾವ ನ್ಯಾಯ?' ಎಂದು ದೊಡ್ಡ ದನಿಯಲ್ಲಿ ಪ್ರಶ್ನಿಸಿದರು. ಅವನಿಗೆ ಅವರ ಮಾತು ನೇರವಾಗಿ ನಾಟಿತು. ತನ್ನ ತಪ್ಪಿನ ಅರಿವಾಯಿತು. ಕೊಡಲಿಯನ್ನು ಅಲ್ಲೇ ಬಿಸಾಡಿ, 'ದಯವಿಟ್ಟು ನನ್ನನ್ನು ಕ್ಷಮಿಸಿ, ಇನ್ನು ಮುಂದೆ ಮರಗಳನ್ನು ಕಡಿಯುವುದಿಲ್ಲ, ಮನುಷ್ಯ ಸ್ನೇಹಿಯಾದ ಮರಗಳನ್ನು ಬೆಳೆಸುತ್ತೇನೆ; ರಕ್ಷಿಸುತ್ತೇನೆ' ಎಂದು ಆ ಹಿರಿಯರಿಗೆ ಮಾತು ನೀಡಿದ.

ನೀತಿ: ಗಿಡಮರಗಳನ್ನು ರಕ್ಷಿಸಿದರೆ ಮನುಷ್ಯಕುಲವನ್ನೇ ರಕ್ಷಿಸಿದಂತೆ. (ಸಂಗ್ರಹ)